ಅಧ್ಯಕ್ಷರು : ಲಘುವಾಗಿ ತೆಗೆದುಕೊಳ್ಳತಕ್ಕ ಪ್ರಶ್ನೆ ಅಲ್ಲ. ಅಂಥಾದ್ದೇನಾದರೂ ಇದ್ದಿದ್ದರೆ ನಾನು ನಿಮಗೆ ಅವಕಾಶವನ್ನೇ ಕೊಡುತ್ತಿರಲಿಲ್ಲ. ಇದಕ್ಕೆ ಒಂದು ವಿಧಿ, ವಿಧಾನ ನಿಯಮ ಏನೂ ಇಲ್ಲವೆ? ಸಚಿವರು ತಪ್ಪು ಮಾಹಿತಿಯನ್ನು ಕೊಟ್ಟಿದ್ದರೆ ಪ್ರಿವಿಲೇಜ್ ಮೂವ್ ಮಾಡಿ ಎಂದು ನಾನು ನಿಮಗೆ ಹೇಳಿಕೊಡುತ್ತಿದ್ದೇನೆ.

ಶ್ರೀ ಎಂ. ಮಹದೇವ್ : ಅದನ್ನೂ ಮಾಡೋಣ. ಈಗ ಹಣವನ್ನು ಯಾವಾಗ ಬಿಡುಗಡೆ ಮಾಡುತ್ತಾರೆ, ಕ್ರಮ ಯಾವಾಗ ತೆಗೆದುಕೊಳ್ಳುತ್ತಾರೆಂಬುದನ್ನು ತಮ್ಮ ಮುಖಾಂತರ ಕೇಳುತ್ತಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಬಹಳ ವಿಶೇಷವಾದ ಪ್ರಶ್ನೆಯನ್ನೇ ಎತ್ತಿದ್ದಾರೆ....

ಶ್ರೀ ಡಿ.ಬಿ. ಚಂದ್ರೇಗೌಡ : ಇದು ವಿಶೇಷವಾದ ಪ್ರಶ್ನೆ ಏನು? ಇದು ಅಡ್ವರ್ಟೈಮೆಂಟ್ ಮೋಷನ್ ಏನು? ಕ್ವೆಶ್ಚನ್ ಅವರ್ ಮುಗಿದು ಹೋಗಿದೆ.

(ಗೊಂದಲ)

ಅಧ್ಯಕ್ಷರು : ಸಂಸದೀಯ ವ್ಯವಹಾರಗಳ ಸಚಿವರನ್ನು ನನ್ನ ರಕ್ಷಣೆಗೆ ಬನ್ನಿ ಎಂದು ಕರೆದೆ, ಅವರು ನನ್ನ ರಕ್ಷಣೆಗೆ ಬರುತ್ತಿದ್ದಾರೆ. ನನ್ನನ್ನು ರಕ್ಷಣೆ ಮಾಡಿಕೊಳ್ಳುವುದಕ್ಕೆ ನನ್ನ ಕೈಯಲ್ಲಿ ಸಾಧ್ಯವಾಗಲಿಲ್ಲ, ಆದುದರಿಂದ ಅವರನ್ನು ಕರೆದೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಈಗ ಪ್ರಶ್ನೋತ್ತರ ಕಾಲ ಮುಗಿದು ಹೋಗಿದೆ. ನಮ್ಮ ನಿಯಮಾವಳಿಯ ಪ್ರಕಾರ ಈಗ ಇಲ್ಲಿ ನಾವು ಚುಕ್ಕೆ ರಹಿತವಾದ ಪ್ರಶ್ನೆಗಳಿಗೆ ಉತ್ತರಿಸುವ ಸಂದರ್ಭ ಇಲ್ಲ, ಅವಕಾಶ ಕೂಡ ಇಲ್ಲ. ಆ ಪ್ರಶ್ನೆಯನ್ನು ಕೂಡ ಎತ್ತುವಂತಿಲ್ಲ. ಅದದಕ್ಕೆ ಬೇರೆ ನಿಯಮಾವಳಿಗಳಿವೆ. ಆ ನಿಯಮಾವಳಿಯ ಪ್ರಕಾರ ಪ್ರಶ್ನೆಯನ್ನು ಎತ್ತಬಹುದು. ಆದುದರಿಂದ ಸನ್ಮಾನ್ಯ ಸದಸ್ಯರು ಇದನ್ನು ತಿಳಿದುಕೊಂಡು ನಿಯಮಾವಳಿಯ ಪ್ರಕಾರ ಪ್ರಶ್ನೆಯನ್ನು ಎತ್ತಿದರೆ ಆಗ ಸರ್ಕಾರ ಉತ್ತರವನ್ನು ಕೊಡುತ್ತದೆ.

ಅರ್ಜಿಗಳನ್ನು ಒಪ್ಪಿಸುವುದು

Sri Sadath Ali Khan : Mr. Speaker, I present the petition regarding shifting of electric transmeter installed at Menon Colony, Nayandanahalli, Bangalore.

ಶ್ರೀ ಶಿವಾನಂದ ಎಚ್. ಕೌಜಲಗಿ : ನನ್ನ ಹೆಸರಿನ ಮುಂದಿರುವ ಈ ಕೆಳಕಂಡ ಅರ್ಜಿಗಳನ್ನು ಸಭೆಯ ಮುಂದಿಡಬಯಸುತ್ತೇನೆ.

ಅ) ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕು ಪೈಕಿ ನಯಾನಗರ ಗ್ರಾಮದಲ್ಲಿ ಕಲ್ಯಾಣ ಮಂಟಪ ಕಟ್ಟುವ ಕುರಿತು.

ಆ) ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕು ಪೈಕಿ ಅಮಟೂರ-ನಯಾನಗರ ರಸ್ತೆಯ ಮೇಲೆ ಬರಗಾಲ ಕಾಮಗಾರಿಯಲ್ಲಿ ರಸ್ತೆಯ ಕೆಲಸವನ್ನು ಮಾಡುವ ಬಗ್ಗೆ.

ಇ) ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕು ಪೈಕಿ ನಯಾನಗರ ಗ್ರಾಮದಲ್ಲಿ ಶಾಲೆ ಕಟ್ಟಡ ರಿಪೇರಿ ಬಗ್ಗೆ.

ಅಧ್ಯಕ್ಷರು : ಅರ್ಜಿಗಳನ್ನು ಒಪ್ಪಿಸಲಾಯಿತು.